ಗುವಾಹಟಿಯಲ್ಲಿ ಸಂಗೀತ ಸತ್ರವು ಆರಂಭವಾದಾಗ, ದೆಹಲಿಯಿಂದ ಮತ್ತೆ ಅಲ್ಲಿಗೆ ಮರಳಿದೆ.

**◆ ಭಕ್ತಿ ಪರಂಪರೆಯನ್ನು ಆಧರಿಸಿದ ಈ ನೃತ್ಯ ಪ್ರಕಾರವನ್ನು ಸತ್ರದ ಹೊರಗೆ ಹೇಗೆ ಪ್ರಸ್ತುತಪಡಿಸಲಾಗುತ್ತದೆ?**

ಸತ್ರಿಯಾ ನೃತ್ಯವು ಭಕ್ತಿಮಾರ್ಗದ ಒಂದು ಭಾಗವೇ ಆಗಿದೆ. ಸತ್ರಗಳಲ್ಲಿರುವ ಗರ್ಭಗುಡಿಗಳಲ್ಲಿ ಭಾಗವತ ಪುಸ್ತಕವೇ ಪ್ರಧಾನವಾದುದು. ಅದಕ್ಕೇ ಪೂಜೆಯನ್ನು ಮಾಡುತ್ತೇವೆ. ಸತ್ರಿಯಾ ನೃತ್ಯ ಪ್ರಸ್ತುತಿಯ ಸಂದರ್ಭದಲ್ಲಿಯೂ ಭಾಗವತ ಪುಸ್ತಕಕ್ಕೆ ದೀಪ ಹಚ್ಚಿ ಪೂಜೆ ಸಲ್ಲಿಸಲಾಗುತ್ತದೆ. ನಮ್ಮ ದೈನಂದಿನ ಜೀವನದಲ್ಲಿ ಧಾರ್ಮಿಕ ಆಚರಣೆಗಳು ಹಾಸುಹೊಕ್ಕಾಗಿದ್ದಾಗ, ಅಲ್ಲಿ ನೃತ್ಯವನ್ನು ಒಂದು ಕಲಾಪ್ರಕಾರವನ್ನಾಗಿ ಪ್ರತ್ಯೇಕಿಸಿ ನೋಡುವುದು ಸಾಧ್ಯವಾಗುವುದಿಲ್ಲ. ಅಸ್ಸಾಮ್‌ನಲ್ಲಿ ನೃತ್ಯ, ಸಂಗೀತ, ಕರಕುಶಲ ಕಲಾಪ್ರಕಾರಗಳೆಲ್ಲವುದಕ್ಕೂ ಇದು ಅನ್ವಯಿಸುತ್ತದೆ. ಜೀವನದ ಪ್ರತಿಹಂತದಲ್ಲಿಯೂ ಭಕ್ತಿಯ ತತ್ತ್ವವೇ ಪ್ರಧಾನ ಅಂಶವಾಗಿರುವಾಗ ಅದು ಉಸಿರಿನಂತೆಯೇ ನಮ್ಮ ಜೀವನದಲ್ಲಿ ಸೇರಿಕೊಂಡಿರುತ್ತದೆ. ಆದ್ದರಿಂದಲೇ ಸಾಂಪ್ರದಾಯಿಕವಾಗಿ ಸತ್ರಿಯಾ ನೃತ್ಯವನ್ನು ಯಾವುದೋ ಸಭಾಂಗಣದಲ್ಲೋ ಕೊಠಡಿಯಲ್ಲೋ ಕಲಿಸಲಾಗುವುದಿಲ್ಲ. ಅದನ್ನು ಇಲ್ಲಿರುವ 'ಕೀರ್ತನಘರ್'ಗಳಲ್ಲಿ ಅಥವಾ 'ನಾಮ್‌ಘರ್'ಗಳಲ್ಲಿ ಕಲಿಸಲಾಗುತ್ತದೆ. ಮೊತ್ತಮೊದಲು ಭಾಗವತ ಕೃತಿಗೆ ನಮಸ್ಕರಿಸಿ, ಸಣ್ಣ ಪುಟ್ಟ ಆಚರಣೆಗಳನ್ನು ಮಗುವಿಗೆ ತಿಳಿಸಿಕೊಟ್ಟ ಬಳಿಕವೇ ಈ ಕಲಾಪ್ರಕಾರವನ್ನು ಕಲಿಸಲಾಗುತ್ತದೆ. ಕೀರ್ತನ ಘರ್ ಅಥವಾ ಸತ್ರಗಳ ಹೊರತಾದ ವೇದಿಕೆಗಳಲ್ಲಿಯೂ ಸತ್ರಿಯಾ ಪ್ರಸ್ತುತಪಡಿಸುವಾಗ ಭಾಗವತ ಕೃತಿಯೇ ಕೇಂದ್ರಬಿಂದುವಾಗಿರುವುದರಿಂದ ಭಕ್ತಿ ಪರಂಪರೆಯನ್ನು ಒಳಗೊಂಡಂತೆ ಈ ಸತ್ರಿಯಾ ಮುಂದುವರೆಯುತ್ತದೆ. ಸತ್ರದ ಹೊರಗೆ ಈ ನೃತ್ಯವನ್ನು ಅಭ್ಯಾಸ ಮಾಡುವಾಗ ಅಲ್ಲಿ ಗುರು ಶಿಷ್ಯರ ಸಂಬಂಧ ಮುಖವಾಗುತ್ತದೆ. ಸತ್ರದೊಡನೆ ನಾವು ಗುರುತಿಸಿಕೊಂಡಾಗ ಬದುಕನ್ನು ಕಲೆಗೆ ಮುಡಿಪಾಗಿಟ್ಟು ಮುಂದುವರೆಯುವ ಧೋರಣೆ ಮನದೊಳಗೆ ಸೇರಿಕೊಳ್ಳುತ್ತದೆ. ಇನ್ನು ಯಾವುದೇ ಕಲೆಯನ್ನಾಗಲೀ, ಗುರುವು ಶಿಷ್ಯಂದಿರಿಗೆ ಹೇಗೆ ಹೇಳಿಕೊಡುತ್ತಾರೆ ಎನ್ನುವಲ್ಲಿಯೇ ಆ ಕಲೆಯ ಯಶಸ್ಸು-ಸೋಲು ಅಡಗಿರುತ್ತದೆ. ಆದ್ದರಿಂದ ಈ ಕಲಾಪ್ರಕಾರದ ಅಂತರಂಗವಾದ ಭಕ್ತಿಯನ್ನು, ಆ ಕಲೆಯಿಂದ ಭಿನ್ನ ಮಾಡಿ ಯಾವುದೇ ಗುರುವು ನೋಡಲಾರನು. ಶಿಷ್ಯನಿಗೆ ಗುರು ಎಷ್ಟು ಮುಖ್ಯವೋ, ಗುರುವಿಗೆ ಶಿಷ್ಯನೂ ಅಷ್ಟೇ ಮುಖ್ಯ. ಯಾಕೆಂದರೆ ಈ ಕಲಾಪರಂಪರೆಯನ್ನು ಮುಂದುವರೆಸುವ ಆಸ್ತಿ ಈ ಶಿಷ್ಯವರ್ಗವೇ ಆಗಿದೆ.

**◆ ಓಜಾಪಲ್ಲಿ ಎಂಬ ಮೂಲನೃತ್ಯವು ವಿಕಾಸ ಹೊಂದಿ ಸತ್ರಿಯಾ ಎಂದು ರೂಪುಗೊಳ್ಳುವ ಸಂದರ್ಭದಲ್ಲಿ ಆದ ಪರಿವರ್ತನೆಗಳೇನೇನು ?**

ಓಜಾಪಲ್ಲಿ ಎಂಬ ಪುರಾತನ ಜನಪದ ನೃತ್ಯ ಪ್ರಕಾರದಿಂದ ವಿಕಾಸಹೊಂದಿದ ಸತ್ರಿಯಾ ನೃತ್ಯವು ಸತ್ರಿಯಾ ಮತ್ತು ಅಸತ್ರಿಯಾ ಎಂಬ ಎರಡು ಪ್ರಕಾರಗಳಲ್ಲಿ ಮುಂದುವರೆಯುತ್ತ ಬಂದಿದೆ. ಅಸತ್ರಿಯಾ ನೃತ್ಯವು ಶ್ರೀಮಂತ ಶಂಕರದೇವ ಅವರ ಕಾಲಕ್ಕಿಂತಲೂ ಪೂರ್ವದಲ್ಲಿ ಇದ್ದಂತಹ ಕಲಾಪ್ರಕಾರ ಎನ್ನಬಹುದು. ಆದರೆ ಸತ್ರಿಯಾ ನೃತ್ಯವು ವಾಸುದೇವ ಪೂಜೆ ಮತ್ತು ಮಾನಸ ಪೂಜೆಗೆ ಆದ್ಯತೆ ನೀಡುತ್ತದೆ. ಸತ್ರಿಯಾ ಮಾರ್ಗದ ಓಜಾಪಲ್ಲಿ ನೃತ್ಯದಲ್ಲಿ ಹೆಚ್ಚಾಗಿ ಶ್ರೀಮಂತ ಶಂಕರದೇವ ಅವರ ಕೃತಿಗಳನ್ನು ಬಳಸಲಾಗುತ್ತದೆ. ಪ್ರಸ್ತುತ ಅಸ್ಸಾಮ್‌ನಲ್ಲಿ ಎರಡೂ ರೀತಿಯ ನೃತ್ಯಗಳು ಚಾಲ್ತಿಯಲ್ಲಿವೆ.

**◆ ಸತ್ರಿಯಾ ನೃತ್ಯಕ್ಕೆ ಸಂಗೀತ ನಾಟಕ ಅಕಾಡೆಮಿಯು ಶಾಸ್ತ್ರೀಯ ನೃತ್ಯ ಪ್ರಕಾರ ಎಂಬ ಮನ್ನಣೆ ನೀಡಬೇಕಾದರೆ, ಸತ್ರಿಯಾ ಕ್ಷೇತ್ರದ ಅನೇಕ ಕಲಾವಿದರು ಪ್ರಯತ್ನ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದವರು ನಿಮ್ಮ ಗುರುಗಳಾದ ಮಣಿರಾಮ್ ದತ್ತ ಮುಕ್ತಿಯಾರ್ ಬಾರ್ಬಾಯನ್. ಒಂದು ಕಲಾಪ್ರಕಾರದ ಏಳ್ಗೆಗೆ ಇಂಥ ಮನ್ನಣೆಗಳು ಎಷ್ಟರ ಮಟ್ಟಿಗೆ ಸಹಕಾರಿ?**

ವೈಯಕ್ತಿಕ ಅಭಿಪ್ರಾಯ ಹೇಳುವುದಾದರೆ, ಶತಮಾನಗಳಿಂದ ಪರಂಪರಾನುಗತವಾಗಿ ನಡೆದು